ಸಿ.ಸಿ.ಟೀವಿಯಂಥ ತಂತ್ರಜ್ಞಾನವನ್ನು ಕ್ರಿಮಿನಲ್ ಲಾಯರ್ ಅಂಜನಾಸುತ ಅವರು ಅಮಾಯಕನನ್ನು ರಕ್ಷಿಸಲು ಬಳಸುತ್ತಿರುವುದಕ್ಕಾಗಿ ಅಭಿನಂದಿಸುತ್ತೇನೆ. ಈ ಮಧ್ಯೆ ಪೊಲೀಸರಿಂದ ಇನ್ನೊಂದು ಮಾಹಿತಿ ಬಂದಿದೆ ಯುವರ್ ಆನರ್, ಅದನ್ನು ತಮ್ಮ ಅವಗಾಹನೆಗೆ ತರಲು ಬಯಸುತ್ತೇನೆ" ಎಂದರು. "ಎಸ್... ಪ್ರೊಸೀಡ್..." ಎಂದರು ಜಡ್ಜ್ ಸಾಹೇಬರು.

"ಯುವರ್ ಆನರ್, ಇದೀಗ ತಾನೆ ಪೊಲೀಸರಿಂದ ತಿಳಿದು ಬಂದ ಮಾಹಿತಿ ಏನೆಂದರೆ, ಯಾರ ಮೇಲೆ ಕೊಲೆ ಯತ್ನ ನಡೆಯಿತು ಎಂದು ಈ ಕೇಸ್ ನಡೆಯುತ್ತಿದೆಯೋ ಆಕೆಗೆ ಐ.ಸಿ.ಯೂ ನಲ್ಲಿ ಪ್ರಜ್ಞೆ ಬಂದಿದೆ ಹಾಗೂ ಅಪಾಯದಿಂದ ಪಾರಾಗಿ ಆರೋಗ್ಯವಾಗಿದ್ದಾಳೆ. ಆಕೆ ತಾನು ನಿದ್ರೆ ಮಾತ್ರೆ ಸ್ವಲ್ಪ ಹೆಚ್ಚಾಗಿ ತೆಗೆದುಕೊಂಡೆ ಇದಕ್ಕೆ ಯಾರೂ ಕಾರಣರಲ್ಲ ಎಂದು ಹೇಳಿಕೆ ಕೊಟ್ಟಿದ್ದಾಳೆ. ಆದ್ದರಿಂದ ಆಪಾದಿತನನ್ನು ಬಿಡುಗಡೆ ಮಾಡಬಹುದು" ಎಂದರು. ಸುನೀಲ್ ಮನೋಹರ್ ದ್ರಾಕ್ಷಿಪುರ್ ಅವನನ್ನು ಬಿಡುಗಡೆಗೆ ಜಡ್ಜ್ ಸಾಹೇಬರು ಆದೇಶ ಹೊರಡಿಸಿದರು.

ಒಂದು ವಾರದ ನಂತರ ಹೇಮಾಮಾಲಿನಿ ದ್ರಾಕ್ಷಿಪುರ್ ಅವರು ಸಿ.ಎಸ್.ಪಿ ಲಾಯರ್ ಅವರ ಮುಂದೆ ಹಾಜರಾದರು. ಕೈಯಲ್ಲಿ ಲಗ್ನ ಪತ್ರಿಕೆ ಇತ್ತು. "ಮತ್ತೆ ಯಾಕ್ರೀ ಬಂದ್ರೀ ನೀವು?" ಎಂದರು ಸಿ.ಎಸ್.ಪಿ.

"ಸಾರ್ ನೋಡಿ, ನನ್ನ ತಮ್ಮ ಬಹಳ ಒಳ್ಳೆ ಗಳಿಗೆಯಲ್ಲಿ ಅರೆಸ್ಟಾಗಿದ್ದ ಅನ್ಸುತ್ತೆ. ಅವನಿಗೆ ಬಿಡುಗಡೆ ಆಗಿ ಈಗ ಮತ್ತೆ ಬಂಧನ ಆಗುತ್ತಿದೆ" ಎಂದಳು ನಗುತ್ತ. "ಮತ್ತೆ ಯಾವ ಕೇಸ್‌ನಲ್ಲಿ ಸಿಕ್ಕಾಕೊಂಡ ಆ ಅವಿವೇಕಿ?" ಅಂತ ಕೇಳಿದರು ಸಿ.ಎಸ್.ಪಿ. "ಬಂಧನ ಅಂದ್ರೆ ವಿವಾಹ ಬಂಧನ ಸಾರ್... ಇವನು ಸಿಕ್ಕಾಕ್ಕೊಂಡಿದ್ನಲ್ಲ ಆ ಕೇಸು. ಆ ಯುವತಿಗೆ ಅವಳ ಅಪ್ಪ ಅಮ್ಮ ಯಾವುದೋ ಗಂಡು ಹುಡುಕಿದ್ದರಂತೆ, ಅದು ಆಕೆಗೆ ಇಷ್ಟ ಇರಲಿಲ್ಲವಂತೆ. ಅದಕ್ಕೆ ಅವಳು ಹೋಟೆಲ್ ರೂಮಿಗೆ ಬಂದು ನಿದ್ದೆ ಮಾತ್ರೆ ನುಂಗಿದಳಂತೆ. ಎಚ್ಚರವಾದಾಗ ನನ್ನ ತಮ್ಮನ ಕತೆಯೆಲ್ಲ ಗೊತ್ತಾಯಿತಂತೆ. ಅವನ ಮೇಲೆ ಕರುಣೆ ಬಂತು. ಅದೇ ಸಮಯದಲ್ಲಿ ನಾನು ನನ್ನ ತಮ್ಮನನ್ನು ಮದುವೆಯಾಗುತ್ತೀಯಾ?'' ಎಂದು ಅವಳನ್ನು ಕೇಳಿದೆ. ಇಬ್ಬರೂ ಹಾಗೂ ಇಬ್ಬರ ಮನೆಯವರೂ ಒಪ್ಪಿದ್ದಾರೆ. ಮುಂದಿನ ಗುರುವಾರ ಅವರ ಮದುವೆ. ತಾವು ತಪ್ಪದೇ ಬರಬೇಕು" ಎಂದು ಹೇಳಿದಳು ಹೇಮಾಮಾಲಿನಿ.

"ಸದ್ಯ ಅವನ ಬಿಡುಗಡೆ ಆದರೆ ನನ್ನ ತಲೆ ಬೋಳುಸ್ತೀನಿ ಅಂತ ಹರಕೆ ಹೊತ್ತಿಲ್ವಲ್ಲ ನೀವು. ಆಯ್ತು ನಡಿರಿ ಬರ್ತೀನಿ ಮದುವೆಗೆ" ಎಂದರು ಲಾಯರ್ ಸಿ.ಎಸ್.ಪಿ.


## ವಿ. ಶ್ರೀನಿವಾಸ

ಭಾರತೀಯ ಜೀವ ವಿಮಾ ನಿಗಮದ ಶಿವಮೊಗ್ಗದ ವಿಭಾಗೀಯ ಕಚೇರಿಯಲ್ಲಿ ಉದ್ಯೋಗ. 2010ರ 'ಸುಧಾ' ಯುಗಾದಿ ವಿಶೇಷಾಂಕದ ಲಲಿತ ಪ್ರಬಂಧ ಸ್ಪರ್ಧೆಯಲ್ಲಿ 'ಲೋಕಾಭಿರಾಮ' ಎಂಬ ಪ್ರಬಂಧಕ್ಕೆ ಎರಡನೇ ಬಹುಮಾನ ಬಂದಿದೆ. ಪತ್ರಿಕೆಗಳಲ್ಲಿ ಕೆಲವು ಪ್ರವಾಸ ಕಥನಗಳು, ಹಾಸ್ಯ ಲೇಖನಗಳು ಹಾಗೂ 'ಪ್ರಜಾವಾಣಿ'ಯಲ್ಲಿ ಕೆಲವು ವಿಡಂಬನೆಗಳು ಪ್ರಕಟವಾಗಿವೆ. ಆಕಾಶವಾಣಿ ಭದ್ರಾವತಿಯಲ್ಲಿ ರೇಡಿಯೋ ಹಾಸ್ಯ ನಾಟಕಗಳು ಪ್ರಸಾರವಾಗಿವೆ.